ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ.

ಅಪರಾಧ ಸಂಖ್ಯೆ **755/2026**

ಪಿರ್ಯಾದಿ: ರಾಜ್ಯದ ಪರವಾಗಿ
ಆನಂದಪುರ ಪೊಲೀಸ್ ಠಾಣೆ.

ವಿರುದ್ಧ

ಆರೋಪಿಃ ಎ 1) ತಮ್ಮಣಪ್ಪ ಬಿನ್ ದುರ್ಗಪ್ಪ
ಸುಮಾರು 62 ವರ್ಷ,
ಚನ್ನಾಪುರ ಗ್ರಾಮ, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

ಆರೋಪಣೆ

ಶ್ರೀ ರಾಘವೇಂದ್ರ ಶೆಟ್ಟಿಗಾರ್, ಬಿ.ಎ., ಎಲ್.ಎಲ್.ಎಮ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆ ಮಾಡುತ್ತಿದ್ದೇನೆ.

ದಿನಾಂಕಃ 28.11.2025 ರಂದು ಸಮಯ 11.45 ಗಂಟೆಗೆ ಸಾಗರ ತಾಲ್ಲೂಕು, ತ್ಯಾಗರ್ತಿ ಗ್ರಾಮದಲ್ಲಿ, ಆರೋಪಿಯಾದ ನೀವು ನಿಮ್ಮ ಮನೆಗೆ ಹೊಂದಿಕೊಂಡಿರುವ ಹಿಂಭಾಗದ ಶೆಡ್ ನಲ್ಲಿ ಅಕ್ರಮವಾಗಿ ಬೆಲ್ಲದ ಕೊಳೆ ಸಂಗ್ರಹಿಸಿಟ್ಟಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಅಧಿನಿಯಮ, 1965 ರ ಕಲಂ 13(1)(ಎಫ್) ರ ಅಡಿ ನನ್ನ ಸಂಜ್ಞೇಯತೆಯಲ್ಲಿ ಅಪರಾಧ ಎಸಗಿರುತ್ತೀರ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದ ಮದ್ಯವನ್ನು ನಿಮ್ಮ ಮನೆಗೆ ಹೊಂದಿಕೊಂಡಿರುವ ಹಿಂಭಾಗದ ಶೆಡ್ ನಲ್ಲಿ ಬಲ್ಲದ ಕೊಳೆಯನ್ನು ಸಂಗ್ರಹಿಸಿಟ್ಟ ಕಳ್ಳಭಟ್ಟಿ ತಯಾರಿಸಿ, ಮಾರಾಟ ಮಾಡಿ, ಈ ಮೂಲಕ ಕರ್ನಾಟಕ ಅಬಕಾರಿ ಅಧಿನಿಯಮ, 1965 ರ ಕಲಂ 32(1) ಮತ್ತು 34 ರ ಅಡಿ ನನ್ನ ಸಂಜ್ಞೇಯತೆಯಲ್ಲಿ ಅಪರಾಧ ಎಸಗಿರುತ್ತೀರ,

ಈ ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ ೧. ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಅಪಾದನೆ ತಿಳಿಯಿತೆ?
ಉತ್ತರಃ

ಪ್ರಶ್ನೆ ೨. ಆರೋಪಣೆಯನ್ನು ಒಪ್ಪುವಿರೋ ಅಥವಾ ವಿಜಾರಣೆಯಾಗಲು ಬಯಸುವಿರೋ?

ಉತ್ತರಃ

**(**ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಹೇಳಿಕೆಯನ್ನು ದಾಖಲುಮಾಡಿಕೊಳ್ಳಲಾಯಿತು**.)**

ದಿನಾಂಕಃ **09** ನೇ ಜೂನ್**, 2026** ರಂದುಃ

**(**ಶ್ರೀ ರಾಘವೇಂದ್ರ ಶೆಟ್ಟಿಗಾರ್**)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ**.**ದ**.**ನ್ಯಾ**.**ದಂಡಾಧಿಕಾರಿಗಳು**,** ಸಾಗರ**.**